**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ: ಎಡಿಎಂ2 ಶಾ.ಪ್ರಾ.ಮಿಂ.ಸಂ-01/2019-20 ದಿನಾಂಕ:-17-05-2019

**ಸುತ್ತೋಲೆ**

ವಿಷಯ:-2019-20ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಮತ್ತು ಮಿಂಚಿನ ಸಂಚಾರ ಕಾರ್ಯಕ್ರಮವನ್ನು ಆಯೋಜಿಸುವ ಬಗ್ಗೆ.

******

**ಶಾಲೆಯ ಶುಭಾರಂಭ-2019-20**

2019-20ನೇ ಶೈಕ್ಷಣಿಕ ವರ್ಷವು ಆರಂಭವಾಗುತ್ತಿದೆ. ಶಾಲೆಯು ದಿನಾಂಕ: 29-05-2019ರಂದು ಪ್ರಾರಂಭಗೊಳ್ಳಲಿದ್ದು ಈ ಹಿನ್ನೆಲೆಯಲ್ಲಿ ಶಾಲೆಗಳ ಕಾರ್ಯಾರಂಭಕ್ಕೂ ಮುನ್ನ ಶಾಲಾ ಹಂತದಲ್ಲಿ ಹಮ್ಮಿಕೊಳ್ಳಬೇಕಾದ ಪೂರ್ವ ಸಿದ್ಧತಾ ಕಾರ್ಯಕ್ರಮಗಳು ಈ ಕೆಳಗಿನಂತೆ ಪಟ್ಟಿ ಮಾಡಿದೆ,ಅದರಂತೆ ಎಲ್ಲಾ ಶಾಲೆಗಳ ಶಿಕ್ಷಕರು, ಮುಖ್ಯ ಶಿಕ್ಷಕರು,ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಅವರ ಅಧೀನ ಕ್ಷೇತ್ರ ಸಿಬ್ಬಂದಿ, ಜಿಲ್ಲಾ ಉಪನಿರ್ದೇಶಕರು, ಎಲ್ಲಾ ಶಿಕ್ಷಣಾಧಿಕಾರಿಗಳು ಅಧೀನ ಕ್ಷೇತ್ರ ಸಿಬ್ಬಂದಿ ಎಲ್ಲರೂ ಸಕ್ರಿಯವಾಗಿ ಪಾಲ್ಗೊಂಡು ಶಾಲೆಯ ಶುಭಾರಂಭದ ಕಾರ್ಯಕ್ರಮವನ್ನು ಯಶಸ್ಸುಗೊಳಿಸಲು ಸೂಚಿಸಿದೆ.

- ಶಾಲಾ ಪ್ರಾರಂಭ ಮುನ್ನಾ ದಿನವೇ ಶಾಲಾವರಣ, ಶಾಲಾ ತರಗತಿ, ಕೊಠಡಿಗಳು, ಅಡುಗೆ ಕೋಣೆ, ಶೌಚಾಲಯ ಇತ್ಯಾದಿಗಳನ್ನು ಸ್ವಚ್ಛಗೊಳಿಸಿಟ್ಟುಕೊಳ್ಳುವುದು. ಶಾಲಾ ಸುರಕ್ಷತೆ, ಶುದ್ಧ ಕುಡಿಯುವ ನೀರು, ಶೌಚಾಲಯಗಳು ಸುಸ್ಥಿತಿಯಲ್ಲಿದೆಯೇ ಎಂದು ಪರಿಶೀಲಿಸುವುದು.
- ದಾಖಲಾತಿ ಆಂದೋಲನ: ರಾಜ್ಯದಲ್ಲಿನ 70116 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದು ಈ ಬಗ್ಗೆ ತೀವ್ರವಾದ ಆಸಕ್ತಿ ವಹಿಸಿ ದಾಖಲಾತಿ ಆಂದೋಲನ ಕಾರ್ಯಕ್ರಗಳನ್ನು ವ್ಯವಸ್ಥಿತವಾಗಿ ಆಯೋಜಿಸುವುದು, ಮಕ್ಕಳ ಜಾಥಾ, ಶಾಲೆ ಬಿಟ್ಟ ಮಕ್ಕಳ ಮನೆಭೇಟಿ, ಅರ್ಹ ವಯಸ್ಸಿನ ಶಾಲಾ ಮಕ್ಕಳನ್ನು ದಾಖಲಿಸಲು ಪೋಷಕರಿಗೆ ಸಾರ್ವಜನಿಕರಿಗೆ ತಿಳವಳಿಕೆ ನೀಡುವ, ದಾಖಲಾತಿಗೆ ಪ್ರೇರೇಪಿಸುವಂತೆ ಕಾರ್ಯ ಚಟುವಟಿಕೆಗಳನ್ನು ಶಾಲಾ ಎಸ್.ಡಿ.ಎಂ.ಸಿ ಸಮಿತಿಯ ಸಹಯೋಗದೊಂದಿಗೆ ಯೋಜಿಸಿ ಹಮ್ಮಿಕೊಳ್ಳುವುದು. ಈ ಕುರಿತಂತೆ ಶಾಲಾ ದಾಖಲಾತಿಗೆ ಸ್ಥಳಿಯ ಆಸಕ್ತ ಸಂಘ ಸಂಸ್ಥೆಗಳ ನೆರವನ್ನು ಪಡೆದು ಮಕ್ಕಳ ದಾಖಲಾತಿಯನ್ನು ವೃದ್ಧಿಸಲು ಎಲ್ಲರು ಕ್ರಿಯಾತ್ಮಕವಾಗಿ ಭಾಗವಹಿಸುವುದು. ಇದಕ್ಕೆ ಪ್ರತ್ಯೇಕ ಕ್ರಿಯಾಯೋಜನೆಯನ್ನು ಶಾಲೆಗಳಲ್ಲಿ ಸಿದ್ದಪಡಿಸಿ ಕಾರ್ಯೋನ್ಮುಖರಾಗಲು ಶಾಲಾ ಮೇಲ್ವಿಚಾರಣಾ ಅಧಿಕಾರಿಗಳು ಶಾಲಾ ಮುಖ್ಯ ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.
- ಶಾಲೆಯಲ್ಲಿ ಪ್ರಾರಂಭ ದಿನ ಹಬ್ಬದ ವಾತಾವರಣ ಸೃಷ್ಠಿಸುವುದು;ಶಾಲೆಯನ್ನು ತಳಿರು ತೋರಣ, ರಂಗೋಲೆಯಿಂದ ಅಲಂಕರಿಸುವುದು. ಮಧ್ಯಾಹ್ನ ಮಕ್ಕಳಿಂದಲೇ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು. ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳೀಯ ಪೋಷಕರು, ನಾಗರೀಕರು ಹಿರಿಯ ವಿದ್ಯಾರ್ಥಿಗಳು ಜನಪ್ರತಿನಿಧಿಗಳನ್ನು ಆಹ್ವಾನಿಸಿ ಈ ಶಾಲಾ ಹಬ್ಬದಲ್ಲಿ ಪಾಲ್ಗೊಳ್ಳುವಂತೆ ವ್ಯವಸ್ಥೆ ಮಾಡುವುದು. ಸರ್ಕಾರದ ಪ್ರೋತ್ಸಾಹಕ ಸಾಮಗ್ರಿಗಳನ್ನು ಎಲ್ಲರ ಸಮ್ಮುಖದಲ್ಲಿ ವಿತರಿಸುವುದು.
- ಬಿಸಿಯೂಟ: ಶಾಲಾ ಪ್ರಾರಂಭದ ದಿನ ಮಕ್ಕಳಿಗೆ ಸಿಹಿಯೂಟದ ವ್ಯವಸ್ಥೆ ಮಾಡುವುದು. ಸರ್ಕಾರದ ಪ್ರೋತ್ಸಾಹಕ ಸಾಮಗ್ರಿಗಳನ್ನು ಎಲ್ಲರ ಸಮ್ಮುಖದಲ್ಲಿ ವಿತರಿಸುವುದು.
- ಶಾಲೆಯ ವಾರ್ಷಿಕ ಯೋಜನೆ ಮತ್ತು ಶಾಲಾ ಶೈಕ್ಷಣಿಕ ಯೋಜನೆಯನ್ನು ಪ್ರತಿ ವರ್ಷದಂತೆ ರಚಿಸಿಕೊಂಡು ಸಿದ್ದಪಡಿಸುವುದು.
- ಶಾಲೆಯ ತರಗತಿ ವೇಳಾ ಪಟ್ಟಿ, ಶಿಕ್ಷಕರ ವೇಳಾಪಟ್ಟಿ ಇವುಗಳನ್ನು ಸಹ ತಯಾರಿಸಿಟ್ಟುಕೊಳ್ಳುವುದು.

- ಶಾಲೆಯ ಪ್ರಾರಂಭದ ದಿನಗಳಲ್ಲಿಯೇ ಶಾಲೆಯ ಎಲ್ಲಾ ವಾರ್ಷಿಕ ಕಾರ್ಯ ಚಟುವಟಿಕೆಗಳ ಕಾರ್ಯಯೋಜನೆಯಂತೆ ಮುಖ್ಯ ಶಿಕ್ಷಕರು ಶಿಕ್ಷಕರ ಸಭೆ ನಡೆಸಿ ಕಾರ್ಯ ಹಂಚಿಕೆ ಮಾಡಿಕೊಳ್ಳುವುದು.
- ಶಾಲಾ ಮಕ್ಕಳ ಹಿಂದಿನ ವರ್ಷದ ಸಾಧನೆಗಳ ಭಾವ ಚಿತ್ರ, ಶಾಲೆಯ ಹಿಂದಿನ ವರ್ಷದ ಸಾಧನೆಗಳನ್ನು ಪ್ರತಿ ಬಿಂಬಿಸುವ ಚಿತ್ರಪಟ ಇತ್ಯಾದಿಗಳನ್ನು ಶಾಲಾವರಣದಲ್ಲಿ ಪ್ರದರ್ಶಿಸುವುದು. ಇವು ಎಲ್ಲರ ಗಮನ ಸೆಳೆಯುವಂತಿರುವುದು ಮುಖ್ಯ.
- ಒಟ್ಟಾರೆ ಶಾಲೆಯ ಪ್ರಾರಂಭದ ಹಬ್ಬವು ಮಕ್ಕಳು ಸಂಭ್ರಮಿಸುವಂತೆ, ಹಬ್ಬದ ಸಡಗರದಿಂದ ಆಚರಿಸಿ ಊರ ಹಬ್ಬವೇ ಶಾಲೆಯಲ್ಲಿ ನಡೆಯುತ್ತಿದೆ ಎನ್ನುವಂತೆ ಮಕ್ಕಳನ್ನು ಪೋಷಕರನ್ನು ಸ್ಥಳೀಯ ಮುಖಂಡರನ್ನು ಶಾಲಾಭಿಮಾನಿಗಳನ್ನು ಸೇರಿಸಿ ಎಸ್.ಡಿ.ಎಂ.ಸಿಯವರೊಂದಿಗೆ ಶಾಲೆಯ ಶುಭಾರಂಭದ ಕಾರ್ಯಕ್ರಮವನ್ನು ಐತಿಹಾಸಿಕವಾಗಿ ಉಳಿಯುವಂತೆ ಆಚರಣೆ ಮಾಡಲು ಎಲ್ಲರೂ ಕಾರ್ಯೋನ್ಮುಖರಾಗುವುದು.

<u>ಮಿಂಚಿನ ಸಂಚಾರ</u>

- ಮಿಂಚಿನ ಸಂಚಾರದ ಕಾರ್ಯಕ್ರಮ ಈ ಹಿಂದಿನ ವರ್ಷಗಳಂತೆ ಈ ವರ್ಷವೂ ಆಯೋಜಿಸಲಾಗಿದೆ. ಮುಖ್ಯವಾಗಿ ಈ ಭೇಟಿಯಲ್ಲಿ ಶಾಲೆಯ ಆರಂಭವಾಗಿ ಶೈಕ್ಷಣಿಕ ಚಟುವಟಿಕೆಗಳು ಜರುಗುತ್ತಿದೆಯೇ? ಎಂಬುದರ ಪರಿಶೀಲನೆಗೆ ನಡೆಯುತ್ತದೆಯಾದರೂ ಈ ಮೇಲಿನ ಪಟ್ಟಿಯ ಕಾರ್ಯಕ್ರಮಗಳು ಶಾಲೆಗಳಲ್ಲಿ ನಡೆಯುತ್ತಿರುವ ಬಗ್ಗೆ ಎಲ್ಲಾ ಹಂತದ ಮೇಲ್ವಿಚಾರಣಾ ಅಧಿಕಾರಿಗಳು ಪರಿಶೀಲಿಸುವುದು.

  ಈ ರೀತಿ ಉತ್ತಮವಾಗಿ ಶಾಲೆಗಳು ಆರಂಭಿಸಿದಂತಹ ಶಾಲೆಗಳ ಹೆಸರುಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು(ಆಡಳಿತ ಮತ್ತು ಅಭಿವೃದ್ಧಿ) ರವರುಗಳು ಮಿಂಚಿನ ಸಂಚಾರದ ಭೇಟಿ ದಿನಗಳಂದು ಅಂದೇ ಕಛೇರಿಯ ಸೂಚನಾ ಫಲಕದಲ್ಲಿ ಅಂತಹ ಶಾಲೆಗಳ ಹೆಸರನ್ನು ಪ್ರಕಟಿಸುವುದರ ಮೂಲಕ ಅಂತಹ ಶಾಲೆಗಳನ್ನು ಶ್ಲಾಘಿಸಬೇಕು.

  ಮಿಂಚಿನ ಸಂಚಾರವನ್ನು ದಿನಾಂಕ: 29-05-2019 ರಿಂದ 08-06-2019ರ ವರೆಗೂ ಹಮ್ಮಿಕೊಳ್ಳುವುದು.
- ಉಪನಿರ್ದೇಶಕರು(ಆಡಳಿತ) ಮತ್ತು ಉಪನಿರ್ದೇಶಕರು(ಅಭಿವೃದ್ಧಿ) ಇವರು ತಮ್ಮ ಅಧಿನ ಮೇಲ್ವಿಚಾರಣಾ ಅಧಿಕಾರಿಗಳಿಗೆ ಮಿಂಚಿನ ಸಂಚಾರ ಭೇಟಿಗಾಗಿ ಪ್ರತ್ಯೇಕ ಸಭೆ ಕರೆದು ಯೋಜನೆ ತಯಾರಿಸಿಕೊಳ್ಳಲು ಕ್ರಮವಹಿಸುವುದು.
- ತಾಲ್ಲೂಕು ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಯವರು ತಮ್ಮ ವ್ಯಾಪ್ತಿಯ ಮೇಲ್ವಿಚಾರಕ ಸಿಬ್ಬಂದಿ ಅಧಿಕಾರಿಗಳನ್ನು ಸಭೆ ಕರೆದು ಮಿಂಚಿನ ಸಂಚಾರ ಶಾಲಾ ಭೇಟಿಯನ್ನು ಆಯೋಜಿಸಿಕೊಳ್ಳುವುದು.
- ಮಿಂಚಿನ ಸಂಚಾರ ಭೇಟಿಯಲ್ಲಿ ಶಾಲೆಯಲ್ಲಿನ ಎಲ್ಲಾ ಕಾರ್ಯಕ್ರಮಗಳನ್ನು ಶಾಲಾ ವಸ್ತುಸ್ಥಿತಿಯನ್ನು ಅವಲೋಕಿಸಿ, ಶಾಲಾ ಮುಖ್ಯ ಶಿಕ್ಷಕ/ಶಿಕ್ಷಕರಿಗೆ ಹಿಮ್ಮಾಹಿತಿ ನೀಡುವುದು. ಶಾಲಾ ಸುಧಾರಣೆಗಾಗಿ ಪ್ರೇರೇಪಿಸಿ ಮಾರ್ಗದರ್ಶನ ನೀಡುವುದು. ಮಿಂಚಿನ ಸಂಚಾರದ ಭೇಟಿಯನ್ನು ಪ್ರತಿ ಶಾಲೆಗೆ 30ರಿಂದ 40 ನಿಮಿಷಗಳ ಅವಧಿಗೆ ಸಿಮಿತಗೊಳಿಸಿ ಗರಿಷ್ಠ ಸಂಖ್ಯೆ ಶಾಲೆಗಳನ್ನು ಭೇಟಿ ಮಾಡಲು ಕಾರ್ಯ ಯೋಜನೆಯನ್ನು ಸಿದ್ಧಪಡಿಸಿಕೊಳ್ಳುವುದು.
- ಮಿಂಚಿನ ಸಂಚಾರ ಕಾರ್ಯಕ್ರಮದಲ್ಲಿ ಅವಲೋಕಿಸಲು ಶಾಲಾವರಣ, ಶೌಚಾಲಯ ಕುಡಿಯುವ ನೀರು ಮದ್ಯಾಹ್ನ ಉಪಹಾರ, ಸಮವಸ್ತ್ರ, ಪಠ್ಯಪುಸ್ತಕ, ಹಾಜರಾತಿ, ದಾಖಲಾತಿ ಇವುಗಳೆಲ್ಲವನ್ನು ಪರಿಶೀಲಿಸಲು ಅನುವಾಗುವಂತೆ ಚೆಕ್‌ಲಿಸ್ಟನ್ನು ನೀಡಿದೆ ಅದರಂತೆ ಮುಂದುವರೆಯುವುದು.

- ಅಂತಿಮವಾಗಿ ಈ ಕಾರ್ಯಕ್ರಮದ ನಂತರ ದಿನಾಂಕ: 15-06-2019ರೊಳಗಾಗಿ ಜಿಲ್ಲಾ ಉಪನಿರ್ದೇಶಕರು ತಮ್ಮ ವ್ಯಾಪ್ತಿಯ ಆಯುಕ್ತಾಲಯಕ್ಕೆ ಈ ಕುರಿತು ವರದಿಯನ್ನು ಕಳುಹಿಸುವುದು.

(ಡಾ॥ ಎಂ.ಟಿ.ರೇಜು ಭಾ.ಆ.ಸೇ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ/ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಲು ತಿಳಿಸಿದೆ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಲು ತಿಳಿಸಿದೆ.

ಪ್ರತಿಗಳು:-

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
2. ಅಧ್ಯಕ್ಷರು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ ಇವರ ಮಾಹಿತಿಗಾಗಿ.
4. ನಿರ್ದೇಶಕರು (ಪ್ರಾಥಮಿಕ) ಪ್ರೌಢ / ಡಿ.ಎಸ್.ಇ.ಆರ್.ಟಿ / ಕೆ.ಎಸ್.ಇ.ಇ.ಬಿ / ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು / ಇತರೆ ಪರೀಕ್ಷೆಗಳು / ಸರ್ವ ಶಿಕ್ಷಣ ಅಭಿಯಾನ / ಆರ್.ಎಂ.ಎಸ್.ಎ / ಗುಲ್ಬರ್ಗಾ ಮತ್ತು ಧಾರವಾಡ ಆಯುಕ್ತಾಲಯದ ನಿರ್ದೇಶಕರುಗಳಿಗೆ ಮಾಹಿತಿಗಾಗಿ.
5. ವಿಭಾಗೀಯ ಸಹ ನಿರ್ದೇಶಕರು, ಬೆಂಗಳೂರು ವಿಭಾಗ, ಮೈಸೂರು, ಬೆಳಗಾಂ ಮತ್ತು ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ.
6. ಪ್ರಾಂಶುಪಾಲರು, ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ, ಮೈಸೂರು, ಜಮಖಂಡಿ, ಮಂಗಳೂರು, ಗುಲ್ಬರ್ಗಾ, ಬೆಳಗಾಂ ಇವರಿಗೆ ಮಾಹಿತಿಗಾಗಿ.